ಕಡೂರು ಡಿಸ್ಟ್ರಿಕ್ಟ್.

ತಾರೀಖು 27ನೇ ಅಕ್ಟೋಬರ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಯಡೆಪಳ್ಳಿ ಟವನಿನಲ್ಲಿರುವ ನೆರ್ಲೆ ಪುಟ್ಟಯ್ಯನ ಜವಳಿ ಅಂಗಡಿಗೆ ಮಾಹೆ ಮಜಕೂರು ತಾರೀಖು 16ನೇ ರಾತ್ರಿ ಪ್ರವೇಶಿಸಿ ರೂಪಾಯಿ 782—10—0 ಕಿಮ್ಮತಿನ ಫಕ್ತ ಜವಳಿಯನ್ನು ಕಳವುಮಾಡಿಕೊಂಡು ಹೋದ ಕಳ್ಳನ ಅಥವಾ ಕಳ್ಳರ ದಸ್ತಗಿರಿ ಬಗ್ಯೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕುಂಪಣಿ ಯಿರಡನೂರು ರೂಪಾಯಿ ಇನಾಂ ಕೊಡಲ್ಪಟ್ಟೀತು.

ಮಹಮ್ಮದಲ್ಲೀ, ಕೆ. ಬಿ.,
ಡಿಪ್ಯುಟಿ ಕಮ್ಮಿಷನರ್.

ಅಮೃತಮಹಲ್ ಇಲಾಖೆ.

ತಿರಸ್ಕರಿಸಲ್ಪಟ್ಟ ಮತ್ತು ಜಾಸ್ತಿಯಾದ ದನಗಳ ಹರಾಜು.

ನಂ. 196. ತಾರೀಖು 22ನೇ ಅಕ್ಟೋಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸುವದೇನಂದರೆ, ಮೈಸೂರು ಗವರ್ನಮೆಂಟ್ ಅಮೃತ ಮಹಲ್ ಇಲಾಖೆಗೆ ಕೇರಿದ ಜಾಸ್ತೀಯಾದ ಮತ್ತು ತಿರಸ್ಕರಿಸಲ್ಪಟ್ಟ ದನಗಳ ಸಾಲಿಯಾನಾ ಹರಾಜು, ಇಗರಡೀಕಂಡ ಸ್ಥಳಗಳಲ್ಲಿ ನಡಿಸಲ್ಪಡುವದು:—

ಹರಾಜು ನಡಿಯತಕ್ಕ ಸ್ಥಳ.	ಹರಾಜು ಹಾಕಲ್ಪಡುವ ಜಾಸ್ತೀ ದನಗಳ ಸುಮಾರು ಸಂಖ್ಯೆ.	ಹರಾಜು ಹಾಕಲ್ಪಡುವ ತಿರಸ್ಕರಿಸಲ್ಪಟ್ಟ ದನಗಳ ಸಂಖ್ಯೆ.	ತಿಂಗಳು.
1. ಗುಬ್ಬೀ ತಾಲ್ಲೂಕಿನಲ್ಲಿರುವ ಬಸ್ತಿಕಟ್ಟೆ ಕಾವಲ್	3 ವರುಷದ ಲಾಗಾಯತು 5 ವರುಷದ ವರಿಗಿನ 50 ಗೂಳಿಗಳು ಡಿಟೋ 30 ಹೋರಿಗಳು	75 ಹಸುಗಳು ವ ಕರುಗಳು	1884ನೇ ನವಂಬರ್ ತಿಂಗಳಲ್ಲಿ
2. ತಿರಾ ತಾಲ್ಲೂಕು ಮುದಗೆರೆ ಕಾವಲ್	ಡಿಟೋ 50 ಗೂಳಿಗಳು ಡಿಟೋ 40 ಹೋರಿಗಳು	15 ಡಿಟೋ	ಡಿಟೋ
3. ಚನ್ನರಾಯಪಟ್ಟಣ ತಾಲ್ಲೂಕು ಹಿರೇಸಾವೆ ಬಳಿಯಣ ದೊಡ್ಡೇರಿ ಕಾವಲ್	ಡಿಟೋ 50 ಗೂಳಿಗಳು ಡಿಟೋ 30 ಹೋರಿಗಳು	25 ಡಿಟೋ	1884ನೇ ಡಿಸಂಬರ್ ತಿಂಗಳಲ್ಲಿ
4. ಹಾಸನ ತಾಲ್ಲೂಕು ಬೀಗೇಗುಡ್ಡ	ಡಿಟೋ 50 ಗೂಳಿಗಳು ಡಿಟೋ 20 ಹೋರಿಗಳು	15 ಡಿಟೋ	ಡಿಟೋ
5. ಯಡತೊರೆ ತಾಲ್ಲೂಕು ಚುಂಚಿನ ಕಟ್ಟೆ	ಡಿಟೋ 40 ಗೂಳಿಗಳು ಡಿಟೋ 40 ಹೋರಿಗಳು	ಡಿಟೋ	1885ನೇ ಜನವರೀ ತಿಂಗಳಲ್ಲಿ
6. ಹೊಳಲಕೆರೆ ತಾಲ್ಲೂಕು ರಾಮಗಿರಿ ಕಾವಲ್	ಡಿಟೋ 50 ಗೂಳಿಗಳು ಡಿಟೋ 50 ಹೋರಿಗಳು	50 ಡಿಟೋ	ಡಿಟೋ
7. ಚಿತ್ರದುರ್ಗದ ತಾಲ್ಲೂಕು ಐಯ್ಯನಹಳ್ಳಿ ಕಾವಲ್	ಡಿಟೋ 50 ಗೂಳಿಗಳು ಡಿಟೋ 30 ಹೋರಿಗಳು	50 ಡಿಟೋ	1885ನೇ ಫಿಬ್ರವರೀ ತಿಂಗಳಲ್ಲಿ
8. ಚಳ್ಳಕೆರೆ ತಾಲ್ಲೂಕು ವರವಿನ ಕಾವಲ್	ಡಿಟೋ 50 ಗೂಳಿಗಳು ಡಿಟೋ 30 ಹೋರಿಗಳು	25 ಡಿಟೋ	ಡಿಟೋ

ಹರಾಜಿನ ಷರತ್ತುಗಳು ವ ತಾರೀಖು ಸುದಾ ಐಯಿಂದ ಪ್ರಕಟಿಸಲ್ಪಡುವದು.

ಅಮಲ್ದಾರರುಗಳು ಅವರವರ ತಾಲ್ಲೂಕಿನಲ್ಲಿ ಈ ಹರಾಜಿನ ಸಂಗತಿಯನ್ನು ಪ್ರಸಿದ್ಧಪಡಿಸತಕ್ಕದ್ದೆಂದು ಕೇಳಿಕೊಳ್ಳಲ್ಪಟ್ಟಿರುತ್ತಾರೆ.

ಯಿ. ಸಿ. ಹೇ ಕರ್ನಲ್,
ಇನ್‌ಚಾರ್ಜ್ ಅಮೃತಮಹಲ್ ಇಲಾಖೆ.